**5.30 ಪಿ.ಎಂ.**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :** ಮಾನ್ಯ ಛೇರ್ಮನ್‌ರವರೇ,

(ಈ ಹಂತದಲ್ಲಿ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಓದಿದರು.)

**8. ಮುಖ್ಯಮಂತ್ರಿಗಳ ಹೇಳಿಕೆ:**

**ವಿಷಯ :** ದಿನಾಂಕ: 28.2.2010ರ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಬಾಂಗ್ಲಾ ದೇಶಿ ನಾಯಕಿ ತಸ್ಲೀಮಾ ನಸ್ರೀನ್‌ರವರ "ಪರ್ದಾ ಹೈ ಪರ್ದಾ" ಎಂಬ ಶೀರ್ಷಿಕೆ ಬಗ್ಗೆ.

ದಿನಾಂಕ: 28.2.2010ರ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ 'ಪರ್ದಾ ಹೈ ಪರ್ದಾ' ಎಂಬ ಶೀರ್ಷಿಕೆಯಲ್ಲಿ ತಸ್ಲೀಮಾ ನಸ್ರೀನ್ (ಬಾಂಗ್ಲಾದೇಶಿ ಲೇಖಕಿ) ಅವರ ಒಂದು ಆಂಗ್ಲ ಪ್ರಬಂಧದ ಕನ್ನಡ ತರ್ಜುಮೆ ಪ್ರಕಟಿಸಲಾಗಿದೆ. ಈ ಪ್ರಬಂಧದಲ್ಲಿ ತಸ್ಲೀಮಾ ನಸ್ರೀನ್‌ರವರು ಮುಸ್ಲಿಂ ಜನಾಂಗದವರ ಪರ್ದಾ ವ್ಯವಸ್ಥೆ ಬಗ್ಗೆ ಚಾರಿತ್ರಿಕ ವಿವರಣೆಯನ್ನು ಕೊಟ್ಟು ಈ ವ್ಯವಸ್ಥೆ ಸರಿಯಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ತಮ್ಮ ಪ್ರಬಂಧದಲ್ಲಿ ಈ ವ್ಯವಸ್ಥೆ ಮಹಿಳೆಯರ ಹಕ್ಕಿಗೆ ವಿರುದ್ಧವಾಗಿದೆ ಮತ್ತು ಇದನ್ನು ಸುಟ್ಟು ಹಾಕಬೇಕು ಎಂದಿದ್ದಾರೆ. ಕೆಲವು ಕಡೆ ಕುರಾನ್ ಮತ್ತು ಪ್ರವಾದಿ ಮಹಮ್ಮದ್‌ರವರ ಪ್ರಸಂಗವನ್ನು ಈ ಸಂದರ್ಭದಲ್ಲಿ ತಂದಿದ್ದಾರೆ.

ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಫೆಬ್ರವರಿ 28ನೇ ತಾರೀಕು ಸಾಯಂಕಾಲ ಎಲ್ಲಾ ಪೊಲೀಸ್ ಘಟಕಾಧಿಕಾರಿಗಳಿಗೆ "ಎಚ್ಚರಿಕೆ ಸಂದೇಶ" ನೀಡಲಾಗಿತ್ತು.

**ಹಾಸನ :**

ಈ ದಿನ ಬೆಳಿಗ್ಗೆ ಸುಮಾರು 11.30 ಗಂಟೆಗೆ ಹಾಸನ ನಗರದಲ್ಲಿ 10 ರಿಂದ 15 ಸಾವಿರ ಮುಸ್ಲಿಮರು ಸೇರಿ ಈ ಪ್ರಬಂಧದ ವಿರುದ್ಧ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಿದ್ದರು. ಇದೇ ಸಮಯದಲ್ಲಿ ಕೆಲವು ಕಿಡಿಗೇಡಿಗಳು ಇತರೆ ಕೋಮಿಗೆ ಸಂಬಂಧಪಟ್ಟ ಪೆಟ್ಟಿಗೆ ಅಂಗಡಿಗಳ ಮೇಲೆ ಕಲ್ಲು ತೂರಾಟವನ್ನು ನಡೆಸಿರುತ್ತಾರೆ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಜನರಿಗೆ ಸಮಾಧಾನಪಡಿಸಿ ಅವರನ್ನು ಕಳುಹಿಸಿರುತ್ತಾರೆ.

ಇದೇ ಸಮಯಕ್ಕೆ ಸುಮಾರು 4 ರಿಂದ 5 ಸಾವಿರ ಹಿಂದೂ ಜನಾಂಗದವರು ಸೇರಿ ಕಲ್ಲು ತೂರಾಟ ಮಾಡಿದ ಬಗ್ಗೆ ತಮ್ಮ ತೀವ್ರ ಅಸಮಧಾನವನ್ನು ವ್ಯಕ್ತಪಡಿಸಿ ಉಗ್ರ ಕ್ರಮವನ್ನು ಜರುಗಿಸಬೇಕೆಂದು ಘೋಷಣೆಯನ್ನು ಕೂಗುತ್ತಾ ಕಲ್ಲು ತೂರಾಟವನ್ನು ನಡೆಸಿ ಕೆಲವು ದ್ವಿಚಕ್ರ ವಾಹನಗಳನ್ನು ಜಖಂಗೊಳಿಸಿರುತ್ತಾರೆ. ತದನಂತರ ಕೆಲವು ಕಡೆ ಗುಂಪು ಗುಂಪಾಗಿ ಎರಡೂ ಕೋಮಿನ ಜನರು ಸೇರಿಕೊಂಡು ಕಲ್ಲು ತೂರಾಟವನ್ನು ನಡೆಸಿರುತ್ತಾರೆ.

ಈ ಘಟನೆಗಳಲ್ಲಿ ಕೆಳಕಂಡ ಆಸ್ತಿಗೆ ಧಕ್ಕೆ ಉಂಟಾಗಿರುತ್ತದೆ.

* 3 ದ್ವಿಚಕ್ರ ವಾಹನಗಳು
* 8 ಪೆಟ್ಟಿಗೆ ಅಂಗಡಿಗಳು
* 1 ಮನೆ

ಅಂದಾಜು ನಷ್ಟ ರೂ. 5.00 ಲಕ್ಷ.

ಘಟನಾ ಸ್ಥಳದಲ್ಲಿ ಕಲಂ 144 ಜಾರಿ ಮಾಡಲಾಗಿದೆ.

**ಶಿವಮೊಗ್ಗ**

ಇದೇ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ನಗರದಲ್ಲಿ ಸುಮಾರು 1.30 ಗಂಟೆಗೆ ಒಂದರಿಂದ ಒಂದೂವರೆ ಸಾವಿರ ಮುಸ್ಲಿಮರು ನಗರದಲ್ಲಿ ಮೆರವಣಿಗೆ ನಡೆಸಿ ಕನ್ನಡ ಪ್ರಭದಲ್ಲಿ ಪ್ರಕಟವಾದ ಪ್ರಬಂಧದ ಬಗ್ಗೆ ಪ್ರತಿಭಟನೆ ಮಾಡಿರುತ್ತಾರೆ.

ಘಟನೆಯಲ್ಲಿ 12 ಮೋಟಾರ್ ಸೈಕಲ್‌ಗಳು, 1 ಆಟೋರಿಕ್ಷಾ, 2 ಟೆಂಪೋ ಟ್ರಾಕ್ಸ್ ಮತ್ತು 8 ಕೆಎಸ್‌ಆರ್‌ಟಿಸಿ ಬಸ್ಸುಗಳು ಜಖಂಗೊಂಡಿರುತ್ತವೆ.

ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿರುತ್ತಾರೆ. ಘಟನಾ ಸ್ಥಳದಲ್ಲಿ ಕಲಂ 144 ಜಾರಿ ಮಾಡಲಾಗಿದೆ.

ಹೆಚ್ಚುವರಿ ಕೆಎಸ್‌ಆರ್‌ಪಿ ಪಡೆಗಳನ್ನು ಹಾಸನ ಮತ್ತು ಶಿವಮೊಗ್ಗಕ್ಕೆ ಕಳುಹಿಸಿಕೊಡಲಾಗಿದೆ. ಸಂಬಂಧಪಟ್ಟ ವಲಯ ಆರಕ್ಷಕ ಮಹಾ ನಿರೀಕ್ಷಕರುಗಳು ಹೆಚ್ಚುವರಿ ಸಿವಿಲ್ ಪೊಲೀಸ್ ತುಕಡಿಗಳ ಜೊತೆಗೆ ಸ್ಥಳಕ್ಕೆ

ಹೋಗಿರುತ್ತಾರೆ. ಸಧ್ಯಕ್ಕಷೆ ಪರಿಸ್ಥಿತಿ ನಿಯಂತ್ರಣದಲ್ಲಿದ್ದು ಬೆಳವಣಿಗೆಗಳ ಮೇಲೆ ನಿಗಾ ಇಡಲಾಗಿದೆ.

ಇವತ್ತು ಇಡೀ ರಾಜ್ಯದಲ್ಲಿ ಬೇರೆ ಬೇರೆ ಕಡೆ ಇಂಥ ಅಹಿತಕರ ಘಟನೆಗಳು ನಡೆಯಬಾರದೆಂದು ಹೇಳಿ ನಮ್ಮ ಉನ್ನತ ಪೊಲೀಸ್ ಅಧಿಕಾರಿಗಳಿಗೆಲ್ಲರಿಗೂ ಸೂಚನೆ ಕೊಡಲಾಗಿದೆ. ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕೆಂದು ನಾನು ಜನರಲ್ಲಿ ವಿನಂತಿಸುತ್ತೇನೆ. ಯಾವುದೇ ಧರ್ಮ ಅನುಸರಿಸುವ ಪ್ರತಿ ವ್ಯಕ್ತಿಗೂ ಅವರದೇ ಆದಂಥ ಭಾವನೆಗಳಿರುತ್ತವೆ. ಈ ಭಾವನೆಗಳಿಗೆ ಧಕ್ಕೆ ಬರುವಂಥ ಘಟನೆಗಳು, ಹೇಳಿಕೆಗಳು, ಲೇಖನಗಳು, ಚಿತ್ರಗಳು ಬಂದರೆ ಪ್ರತಿಯೊಬ್ಬ ಅನುಯಾಯಿಗೆ ಸಹಜವಾಗಿ ನೋವಾಗುತ್ತದೆ. ಈ ಪ್ರಕರಣದಲ್ಲಿ ಕನ್ನಡ ಪ್ರಭ ದಿನಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಬಂದಿರುವ ಲೇಖನ ಭಾವನೆಗಳನ್ನು ಕೆರಳಿಸಿವೆ. ಇದು ಬಾಂಗ್ಲಾ ದೇಶದ ಲೇಖಕಿ ಬರೆದಿರುವ ಒಂದು ಆಂಗ್ಲ ಪ್ರಬಂಧದ ಕನ್ನಡ ಅನುವಾದ. ಆದ್ದರಿಂದ ಇವತ್ತು ನಾಡಿನ ಎಲ್ಲಾ ಜನರಿಗೂ ಕರೆ ಕೊಡುತ್ತಿದ್ದೇನೆ. ದಯಮಾಡಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಿ ಮತ್ತೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಜನತೆಗೆ ಕೊಡುತ್ತೇನೆ. ಮತ್ತೊಮ್ಮೆ ಈಗಾಗಲೇ ನಮ್ಮ ಎಲ್ಲಾ ಪೊಲೀಸ್ ಅಧಿಕಾರಿಗಳು ಎಲ್ಲಾ ಜಿಲ್ಲೆಗಳ ವರಿಷ್ಠಾಧಿಕಾರಿಗಳ ಸಂಪರ್ಕದಲ್ಲಿದ್ದಾರೆ. ಇಂಥ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸಿದ್ದೇವೆ, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲಿಕ್ಕೆ ಎಲ್ಲಾ ರೀತಿಯ ಗಮನ ಹರಿಸುತ್ತಿದ್ದೇವೆ.

**ಶ್ರೀ ಆರ್. ರೋಷನ್‌ಬೇಗ್** : ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ನೀಡಿದ್ದಾರೆ. ಈ ಘಟನೆಯಲ್ಲಿ ಎಷ್ಟು ಜನರು arrest ಆಗಿದ್ದಾರೆ? ಯಾರು ಈ ರೀತಿಯ ಪ್ರಚೋದನೆ ಮಾಡುತ್ತಾರೆ ಅವರಿಗೆ as per law action ತೆಗೆದುಕೊಳ್ಳಬೇಕು. ಅವರು ಯಾರಾದರೂ ಆಗಿರಲಿ, ಆದರೆ ನಾಳೆ ಸುಮ್ಮಸುಮ್ಮನೆ ಇನ್ನೊಬ್ಬರು ಯಾರಾದರೂ ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾರೆ, ಅದನ್ನು ತರ್ಜುಮೆ ಮಾಡಿ, ಮತ್ತೆ ಈ

ರೀತಿ ಪ್ರಚೋದನೆ ಮಾಡಿದರೆ ಹೇಗೆ? ಈ ಪತ್ರಿಕೆಯ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವಿರಾ? ಕೇಸ್ ಬುಕ್ ಮಾಡಿರುವಿರಾ ತಿಳಿಸಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** (ಮುಖ್ಯಮಂತ್ರಿಗಳು): ಈಗಾಗಲೇ ಹಾಸನದ ಪೊಲೀಸ್ ಅಧಿಕಾರಿಗಳು ಈ ಲೇಖನದ ಹಿನ್ನೆಲೆಯಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತಿದ್ದಾರೆ. ನಾನಿಷ್ಟೇ ಹೇಳಲಿಕ್ಕೆ ಇಚ್ಛೆಪಡುವುದು, ಈಗಾಗಲೇ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ನಾನು ಹೇಳುವುದು ಪರ ವಿರುದ್ಧ ಎನ್ನುವುದು. ..

**ಶ್ರೀ ಸಿದ್ದರಾಮಯ್ಯ** (ವಿರೋಧ ಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಗಳೇ ಒಂದು ನಿಮಿಷ ಕುಳಿತುಕೊಳ್ಳಿ. ಈಗೇನಾಗಿದೆ ಎಂದರೆ ಇದು ಪತ್ರಿಕೆಯಲ್ಲಿ ಬರದೇ ಹೋಗಿದ್ದರೆ ಯಾರೋ ಬಾಂಗ್ಲಾ ದೇಶದ ಲೇಖಕಿ ತಸ್ಲೀಮಾ ನಸ್ರೀನ್ ಅವರು ಬರೆದಿದ್ದಾರೆ ಅವರ ಲೇಖನದಲ್ಲಿ ಅವರ ಅಭಿಪ್ರಾಯವನ್ನು ಏನಾದರೂ ವ್ಯಕ್ತಪಡಿಸಲಿ. ಆದರೆ ಇಲ್ಲಿ ಪತ್ರಿಕೆಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಿ ಬರೆಯಬೇಕಾದಂಥ ಅಗತ್ಯವಿರಲಿಲ್ಲ. ಅದು ಮಾಡಿರುವುದರಿಂದಲೇ ಬೆಂಕಿ ಹತ್ತಿಕೊಳ್ಳಲಿಕ್ಕೆ ಕಾರಣವಾಗಿದೆ, ಅದರಿಂದಲೇ ಈ ರೀತಿ instigation ಆಗಿರುವುದು. ಇದನ್ನು ಯಾರು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಎಲ್ಲಿಯೂ ಕೂಡ ಬೇರೆ ಜಿಲ್ಲೆಗಳಿಗೆ ಇದು spread ಆಗದೇ ಇರುವ ರೀತಿ ಎಲ್ಲಾ ಕಡೆ ಬಿಗಿ ಕ್ರಮ ಕೈಗೊಳ್ಳಬೇಕು. ಯಾರ್ಯಾರು ಇದಕ್ಕೆ ಸಂಬಂಧಪಟ್ಟವರಿದ್ದಾರೆ ಅವರಿಗೆ ರಾಜ್ಯ ಸರ್ಕಾರ ಇದೆ, ಇಂಥದ್ದೆಲ್ಲಾ ಮಾಡಬಾರದು ಎಂದು ಅವರಿಗೆ ಗೊತ್ತಾಗಬೇಕು. ಇಂತಹ ಅವಕಾಶವನ್ನು ಯಾರಾದರು ಕಿಡಿಗೇಡಿಗಳು ಉಪಯೋಗಿಸಿಕೊಳ್ಳುತ್ತಾರೆ, ಬೇರೆ ಬೇರೆ ಸಮಾಜಘಾತುಕ ಶಕ್ತಿಗಳು ಇದನ್ನು ಬಳಸಿಕೊಳ್ಳತಕ್ಕಂಥ ಕೆಲಸ ಮಾಡುತ್ತಾರೆ. ಇದು ಆಗದೇ ಇರುವಂತಹ ರೀತಿಯಲ್ಲಿ ನೋಡಿಕೊಳ್ಳುವಂಥದ್ದು ಅತ್ಯಂತ ಅವಶ್ಯಕವಿದೆ.

**ಅಧ್ಯಕ್ಷರು**: ಆಯಿತು. Clarification ಹೇಳಿದ್ದಾರಲ್ಲಾ, ಸಾಕು.

ಈಗ ಗಮನ ಸೆಳೆಯುವ ಸೂಚನೆ. ಶ್ರೀ ಬಿ.ಬಿ.ರಾಮಸ್ವಾಮಿಗೌಡ.